**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹರಿಹರ**

ಓ.ಎಸ್.ನಂ.66/2021 ಡಿ ಡಬ್ಲು – 1

ದಿನಾಂಕ 04.03.2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ** ವಾದಿ ಪರ ಶ್ರೀ ಜೆ ಎಸ್ ವಿ ವಕೀಲರಿಂದಃ

ನಾನು ವ್ಯವಸಾಯ ಮಾಡುತ್ತೇನೆ. ನಾನು ಬಿ ಎಎಲ್ ಎಲ್ ಬಿ ಪದವೀಧರ. ನಾನು ಸುಮಾರು 5 ವರ್ಷಗಳ ಕಾಲ ವಕೀಲ ವೃತ್ತಿಯನ್ನು ಮಾಡಿರುತ್ತೇನೆ. ದಾವಾ ಹಾಕುವ ಸಮಯದಲ್ಲಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಪಹಣಿಯನ್ನು ಹಾಜರು ಪಡಿಸಿದ್ದೇನೆ. ನನ್ನ ಪರವಾಗಿ ಗುರುತಿಸಿಕೊಂಡ ದಾಖಲೆಗಳಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದ ಪಹಣಿ ಇರುತ್ತದೆ. ಅದನ್ನು ನಿಪಿ –9 ಎಂದು ಗುರುತಿಸಲಾಗಿದೆ. ದಾವೆಯನ್ನು 4 ಎಕರೆ ವಿಸ್ತೀರ್ಣದ ಜಮೀನಿಗೆ ಹಾಕಿರುತ್ತೇನೆ. ಸದರಿ 4 ಎಕರೆ ಜಮೀನಿನ ಪೂರ್ವಕ್ಕೆ ನಮ್ಮ ಜಮೀನು, ಪಶ್ಚಿಮ ದಿಕ್ಕಿಗೆ ಪ್ರತಿವಾದಿಯ ಇದೆ. ಉತ್ತರ ದಿಕ್ಕಿಗೆ ಡಿಬಿ ಕೆರೆ ಚಾನಲ್ , ದಕ್ಷಿಣಕ್ಕೆ ಜಸ್ತಿ ಉಮೇಶರವರ ಜಮೀನು ಇರುತ್ತದೆ. ದಾವಾ ಶೆಡ್ಯುಲ್ ಆಸ್ತಿ ಸರ್ವೆ ನಂಬರ್ 79/3 ರಲ್ಲಿಯ 25 ಗುಂಟೆ ಜಮೀದಿಗೆ ಸಂಬಂಧಿಸಿದಂತೆ ಪಹಣಿಯನ್ನು ಹಾಜರುಪಡಿಸಿರುವುದಿಲ್ಲ. ಸರ್ವೆ ನಂಬರ್ 79 ರ ಸಬ್ ನಂಬರ್ 79/3 ಇರುತ್ತದೆ. 4 ಎಕರೆ ಜಮೀನು ನೀರಾವರಿ ಜಮೀನು ಇರುತ್ತದೆ. ಸನ್ 2021 ರಲ್ಲಿ ಸರ್ವೆ ನಂಬರ್ 79 ರ 1 ಎಕರೆಗೆ ಜಮೀನು ಎಷ್ಟು ಬೆಲೆ ಬಾಳುತ್ತಿತ್ತು ನನಗೆ ಹೇಳಲು ಆಗುವುದಿಲ್ಲ. ನಂದಿತಾವರೆ ಗ್ರಾಮದಲ್ಲಿ ಪ್ರತಿವರ್ಷ ಜಮೀನಿನ ಬೆಲೆಗಳು ಏರಿಕೆಯಾಗುತ್ತಿರುತ್ತವೆ ಎಂದರೆ ಎಲ್ಲಾ ಕಡೆಯೂ ಆ ರೀತಿ ಆಗುತ್ತವೆ ಎಂದು ನುಡಿಯುತ್ತಾರೆ. ನಂದಿತಾವರೆ ಗ್ರಾಮದಲ್ಲಿ ಸನ್ 2021 ರಲ್ಲಿ 1 ಎಕರೆ ನೀರಾವರಿ ಜಮೀನಿಗೆ 15–20 ಲಕ್ಷ ಬೆಲೆ ಇತ್ತು ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ವ್ಯಾಲ್ಯುವೇಶನ್ ಸ್ಲಿಪ್ ಹಾಕಿರುವ ಬಗ್ಗೆ ನನಗೆ ಗೊತ್ತಿಲ್ಲ. 25 ಗುಂಟೆ ಜಮೀನಿಗೆ ಪ್ರತ್ಯೇಕವಾಗಿ ಕಂದಾಯ ನಿಗದಿಪಡಿಸಿರುವುದಿಲ್ಲ. 4 ಎಕರೆ ಜಮೀನಿನ ಕಂದಾಯ ಎಷ್ಟು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವಾಯಲ್ಲಿ ಹಾಕಿರುವ ವ್ಯಾಲ್ಯುವೇಶನ್ ಸ್ಲಿಪ್ ನ್ನು ಇವತ್ತಿನ ವರೆಗೂ ನಾನು ಪರಿಶೀಲನೆ ಮಾಡಿರುವುದಿಲ್ಲ. 25 ಗುಂಟೆ ಜಮೀನಿಗೆ ಮಾಲೀಕರೆಂದು ಘೋಷಿಸಲು ಪರಿಹಾರ ಕೇಳಿ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿ. ಯಾವ ದಾಖಲೆಯ ಆಧಾರದ ಮೇಲೆ ವ್ಯಾಲ್ಯುವೇಶನ್ ಸ್ಲಿಪ್ ಲ್ಲಿ ದಾವಾ ಆಸ್ತಿ ಮೌಲ್ಯವನ್ನು 4 ಲಕ್ಷ 50 ಸಾವಿರ ಎಂದು ತೋರಿಸಿರುತ್ತೀರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ಯಾವುದೇ ಸರ್ಕಾರದ ವ್ಯಾಲ್ಯುವೇಶನ್ ಪ್ರಕಾರ ತೋರಿಸಿರುತ್ತೇವೆ. ಆ ಬಗ್ಗೆ ಸರ್ಕಾರದ ಆದೇಶ ನನ್ನ ಬಳಿ ಇರುವುದಿಲ್ಲ.

ಸರ್ವೆ ನಂಬರ್ 79 ಕ್ಕೆ ಸಂಬಂದಿಸಿದಂತೆ ಸನ್ 1966–67 ರಿಂದ 1969–70 ನೇ ಸಾಲಿನ 3 ರ ಪಹಣಿಯನ್ನು ನಾನು ತೆಗೆಸಿ ನೋಡಿರುವುದಿಲ್ಲ. ಪ್ರತಿವಾದಿಯು ಈ ಪ್ರಕರಣದಲ್ಲಿ ಹಾಜರು ಪಡಿಸಿದ ದಾಖಲೆಗಳ ಬಗ್ಗೆ ನಾನು ತೆಗೆದು ನೋಡಿರುವುದಿಲ್ಲ. ಪ್ರತಿವಾದಿಯು ತನ್ನ ತಕರಾರಿನ ಜೊತೆ ಸಲ್ಲಿಸಿರುವ ದಾಖಲೆಗಳ ಬಗ್ಗೆ ನಾನು ವಕೀಲರನ್ನು ಕೇಳಿ ತಿಳಿದುಕೊಂಡಿರುವುದಿಲ್ಲ. ಯಾವ ಯಾವ ದಾಖಲೆಗಳನ್ನು ಹಾಕಿದ್ದಾರೆ ಎಂದು ವಕೀಲರನ್ನು ಕೇಳಿ ತಿಳಿದುಕೊಳ್ಳಲು ತೊಂದರೆ ಇರಲಿಲ್ಲ. ಸಾಕ್ಷಿಗೆ ಒಂದು

ಪಹಣಿಯನ್ನು ತೋರಿಸಿ ಒಂದು ಕೈ ಬರಹದ ದೃಡೀಕೃತ ಪಹಣಿಯನ್ನು ತೋರಿಸಿ ಅದು ಸರ್ವೆ ನಂಬರ್ 79 ಕ್ಕೆ ಸಂಬಂದಿಸಿದ ಸನ್ 1966–67 ರಿಂದ 1969–70 ನೇ ಸಾಲಿಗೆ ಸಂಬಂಧಿಸಿದ ಪಹಣಿ ಇರುತ್ತದೆ ಎಂದು ಸಾಕ್ಷಿಯು ನೋಡಿ ಒಪ್ಪಿಕೊಂಡಿರುತ್ತಾರೆ ಅದನ್ನು ನಿಡಿ–1 ಎಂದು ಗುರುತಿಸಲಾಯಿತು. ನಿಡಿ –1 ರಲ್ಲಿ ಒಟ್ಟು 18 ಎಕರೆ, 13 ಗುಂಟೆ ವಿಸ್ತೀರ್ಣ ಇರುವುದಾಗಿ ತೋರಿಸಿದ್ದು ಅದರಲ್ಲಿ ಆ ಪೈಕಿ 1 ಎಕರೆ 6 ಗುಂಟೆ ಕರಾಬು ಇರುತ್ತದೆ. ಸರ್ವೆ ನಂಬರ್ 79 ರಲ್ಲಿ ಒಟ್ಟು 18 ಎಕರೆ 13 ಗುಂಟೆ ಜಮೀನು ಇದ್ದು ಆ ಪೈಕಿ 1 ಎಕರೆ 6 ಗುಂಟೆ ಕರಾಬು ಇರುವ ಬಗ್ಗೆ ನನ್ನ ಬಳಿ ದಾಖಲೆಗಳು ಇರುತ್ತವೆ. ಸದರಿ ಜಮೀನಿಗೆ ಮೂಲ ಮಾಲೀಕರು ಬಸಪ್ಪ ಎಂದರೆ ಸರಿ. ಸದರಿ ಜಮೀನನ್ನು ನಮ್ಮ ತಂದೆ ಸನ್ 1954 ರಲ್ಲಿ ಸರ್ವೆ ನಂಬರ 79 ರಲ್ಲಿ ಕರಾಬನ್ನು ಸಹಿತ ಒಟ್ಟು ಜಮೀನನ್ನು ಖರೀದಿ ಮಾಡಿರುತ್ತಾರೆ. ನನ್ನ ತಂದೆ ಸನ್ 1954 ರಲ್ಲಿ ನೋಂದಾಯಿತ ಖರೀದಿ ಪತ್ರದ ಮೂಲಕ ಸದರಿ ಜಮೀನನ್ನು ಖರೀದಿ ಮಾಡಿರುತ್ತಾರೆ. ಸದರಿ ಖರೀದಿ ಪತ್ರವನ್ನು ಈ ದಾವೆಯಲ್ಲಿ ನಾನಾ ಹಾಜರು ಪಡಿಸಿರುವುದಿಲ್ಲ. ಖರೀದಿ ಪತ್ರವನ್ನು ಸದರಿ ದಾವೆಯಲ್ಲಿ ಹಾಜರು ಪಡಿಸಲು ಯಾವುದೇ ತೊಂದರೆ ಇರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಅದು ಬ್ಯಾಂಕಿನಲ್ಲಿ ಇದ್ದು 20 ಲಕ್ಷ ಸಾಲ ಇರುವುದರಿಂದ ಬ್ಯಾಂಕಿನವರು ಕೊಡುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಖರೀದಿ ಪತ್ರದ ದೃಡೀಕೃತ ನಕಲನ್ನು ನಾನು ಸಬ್ ರಿಜಿಸ್ಟ್ರಾರ್ ಕಚೇರಿಯಿಂದ ಪಡೆದಿರುವುದಿಲ್ಲ. ದಾವೆ ಹಾಕುವುದಕ್ಕಿಂತ ಮುಂಚೆ ಸದರಿ ಖರೀದಿ ಪತ್ರದ ದೃಡೀಕೃತ ನಕಲನ್ನು ತೆಗೆಸಿಕೊಳ್ಳಲು ಪ್ರಯತ್ನಿಸಿರುವುದಿಲ್ಲ. ನಮ್ಮ ತಂದೆಯವರು ಖರೀದಿ ಪತ್ರದಲ್ಲಿ ಸರ್ವೆ ನಂಬರ್79 ರಒಟ್ಟು ವಿಸ್ತೀರ್ಣ ಕರಾಬು ಸಹಿತ, ಚೆಕ್ಕು ಬಂದಿಯನ್ನು ತೋರಿಸುತ್ತಾರೆ ಎಂದರೆ ನಿಜ. ಸದರಿ ಖರೀದಿ ಪತ್ರದಲ್ಲಿ ತೋರಿಸಿದ ಸ್ವತ್ತಿನ ಚೆಕ್ಕು ಬಂದಿಯ ಸ್ವಾಧೀನದಲ್ಲಿ ಇದ್ದೆವು ಎಂದರೆ ನಿಜ. ನಮ್ಮ ತಂದೆಯವರು ಸದರಿ ಜಮೀನಿನಲ್ಲಿ 31.01.1978 ರವರೆಗೆ ಸ್ವಾಧೀನದಲಿ ಇದ್ದರು ಎಂದರೆ ನಿಜ. ಸಾಕ್ಷಿಯು ಸ್ವತಃ ಹೇಳುವುದೇನೆಂದರೆ ನಂತರ 2 ಎಕರೆ 20 ಗುಂಟೆ ಜಮೀನನ್ನು ಮನ್ನಾ ಕೃಷ್ಣ ಮೂರ್ತಿಯವರಿಗೆ ಮಾರಾಟ ಮಾಡಿ ಸದರಿ ಜಮೀನಿನ ಸ್ವಾಧೀನವನ್ನು ಅವರಿಗೆ ಕೊಟ್ಟಿರುತ್ತಾರೆ. ಆ ಬಗ್ಗೆ ನೊಂದಾಯಿತ ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ನಿಜ. ಸದರಿ ಕ್ರಯ ಪತ್ರಕ್ಕೆ ನಾನು ಸಹಿ ಹಾಕಿರುವುದಿಲ್ಲ. ನಾನು ಸದರಿ ಕ್ರಯ ಪತ್ರವನ್ನು ಓದಿ ನೋಡಿ ತಿಳಿದುಕೊಂಡಿರುತ್ತೇನೆ . ಸದರಿ ಜಮೀನಿನ ಪೂರ್ವಕ್ಕೆ ಮತ್ತು ಉತ್ತರಕ್ಕೆ ನನ್ನ ತಂದೆಯ ಉಳಿದ ಜಮೀನು ಇರುತ್ತದೆ. ಅದು ಸರ್ವೆ ನಂಬರ 79 ಕ್ಕೆ ಸಂಬಂಧಿಸಿರುತ್ತದೆ. ಸದರಿ 2 ಎಕರೆ 20 ಗುಂಟೆ ಜಮೀನಿನ ಪಶ್ಚಿಮಕ್ಕೆ ಬಸವನಗೌಡ ಹಾಗೂ ಪಾಪಯ್ಯ ಇತರೆಯವರ ಜಮೀನು ಇರುತ್ತದೆ ಎಂದರೆ ಇರಬಹುದು. ಸದರಿ ಜಮೀನಿನ ಪಶ್ಚಿಮಕ್ಕೆ ಪ್ರತಿವಾದಿಯವರ ಜಮೀನು ಇರುತ್ತದೆ ಎಂದರೆ ಇರಬಹುದು. ಸದರಿ ಜಮೀನಿನ ದಕ್ಷಿಣಕ್ಕೆ ದಿಕ್ಕಿಗೆ ಇರುವ ಜಮೀನಿನ ಸರ್ವೆ ನಂಬರ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ನಮ್ಮ ತಂದೆಯವರು ಮನ್ನಾ ಕೃಷ್ಣ ಮೂರ್ತಿಯವರಿಗೆ ಮಾರಾಟ ಮಾಡಿದ ಜಮೀನು ಬಸವನಗೌಡರ ಜಮೀನಿನ ಪೂರ್ವ ದಿಕ್ಕಿನ ತುದಿಯಿಂದ ಪ್ರಾರಂಭವಾಗುತ್ತದೆ ಎಂದರೆ ಸರಿಯಲ್ಲ.

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಸಾಕ್ಷಿಗೆ ಅವರ ತಂದೆ ಮನ್ನಾ ಕೃಷ್ಣ ಮೂರ್ತಿಯವರಿಗೆ ಬರೆದುಕೊಟ್ಟ ಖರೀದಿ ಪತ್ರದ ದೃಡೀಕೃತ ನಕಲನ್ನು ಸಾಕ್ಷಿಗೆ ತೋರಿಸಿ ಸಾಕ್ಷಿಯು

ನೋಡಿ ಒಪ್ಪಿಕೊಂಡಿದ್ದರಿಂದ ನಿಡಿ –2 ಎಂದು ಗುರುತಿಸಲಾಯಿತು. ಸದರಿ ನಿಡಿ –2 ರಲ್ಲಿ 2 ಎಕರೆ 20 ಗುಂಟೆ ಜಮೀನಿನ ಚೆಕ್ಕು ಬಂದಿಯಲ್ಲಿ ಪಶ್ಚಿಮಕ್ಕೆ ಬಸವನಗೌಡ ಮತ್ತು ಪಾಪಯ್ಯ ರವರ ಜಮೀನು ಎಂದು ತೋರಿಸಿರುತ್ತಾರೆ. ಸದರಿ 2 ಎಕರೆ 20 ಗುಂಟೆ ಜಮೀನು ಬಸವನಗೌಡ ಮತ್ತು ಪಾಪಯ್ಯ ರವರ ಜಮೀನು ಪೂರ್ವ ದಿಕ್ಕಿನ ತುಂದಿಯಿಂದ ಪ್ರಾರಂಭವಾಗುತ್ತದೆ ಎಂದರೆ ನಿಜ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು ಮಂಜೂರು ಮಾಡಿ ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹರಿಹರ